# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

**ಸಿಸಿ: 1517/2022**

**ಪಿರ್ಯಾದುದಾರರು** : ನಿಂಗೇಗೌಡ ಬಿನ್ ಲೇಟ್ ದೊಡ್ಡಲಿಂಗೇಗೌಡ,
45 ವರ್ಷ,
ವಾಸಃ ದ್ಯಾವಪಟ್ಟಣ ಗ್ರಾಮ,
ಅರಳಾಳುಸಂದ್ರ ಪೋಸ್ಟ್,
ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

-ವಿರುದ್ಧ-

**ಆರೋಪಿ** : ಮಂಜುನಾಥ ಬಿ.ಕೆ. ಬಿನ್ ಕೆಂಪೇಗೌಡ,
45 ವರ್ಷ,
ವಾಸ ಃ ಹೆಚ್ ಬ್ಯಾಡರಹಳ್ಳಿ ಗ್ರಾಮ,
ಮಂಕುಂದ,
ರಾಮನಗರ ತಾಲ್ಲೂಕು,
ರಾಮನಗರ ಜಿಲ್ಲೆ.

ಅಚ್ಚು ಲೇಡೀಸ್ ಪ್ಯಾಷನ್ ಡಿಸೈನರ್,
ಸಾತನೂರು ರಸ್ತೆ,
ಲಾಳಘಟ್ಟ ಸರ್ಕಲ್, ಮಿಲ್ಕ್ ಡೈರಿ ಹತ್ತಿರ,
ಕನಕ ನಗರ, ಚನ್ನಪಟ್ಟಣ.

## ಆಪಾದನೆ

ಆರೋಪಿ ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿರುತ್ತೀರಿ. ಈ ಪರಿಚಯದ ಮೇರೆಗೆ ಆರೋಪಿಯು ತನ್ನ ಪ್ಯಾಷನ್ ಡಿಸೈನರ್ ಅಂಗಡಿ ಅಭಿವೃದ್ಧಿ ಮಾಡುವ ಸಲುವಾಗಿ ಸಾಲ ಕೇಳಿದ್ದು, ಪಿರ್ಯಾದುದಾರರು ನಿವೇಶನ ಖರಿದಿಸುವ ಸಲುವಾಗಿ ಕೂಡಿಸಿ ಇಟ್ಟಿದ್ದ **ರೂ.4,00,000/-** ಹಾಗೂ **12.05.2020** ರಂದು ಸಾಲವಾಗಿ ಪಡೆದಿದ್ದ **ರೂ.2,00,000/-** ಹಾಗೂ **ರೂ.22.09.2020** ರಂದು ತನ್ನ ಅಣ್ಣನಿಂದ ಪಡೆದಿದ್ದ **ರೂ.3,00,000/-** ಗಳು ಒಟ್ಟು **ರೂ.9,00,000/-** ಗಳನ್ನು ಡಿಸೆಂಬರ್ **2020** ರ ಕೊನೆಯ ವಾರದಲ್ಲಿ ಸಾಲವಾಗಿ ಪಡೆದಿದ್ದು ಹಾಗೂ ಸದರಿ ಹಣವನ್ನು ಪಿರ್ಯಾದುದಾರರಿಗೆ ಒಂದು ವರ್ಷದ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ. ತದನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗೆ ಸಾಲದ ಭದ್ರತೆಗಾಗಿ ಚನ್ನಪಟ್ಟಣ

ಶಾಖೆಯ ಐಸಿಐಸಿಐ ಬ್ಯಾಂಕ್ ಚೆಕ್ ಸಂಖ್ಯೆ: **002748** ಇದರ ದಿನಾಂಕ **08.03.2022** ರ ರೂ.**9,00,000/-** ದ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ಹೇಳಿರುತ್ತೀರಿ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ ನ್ನು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕರ್ನಾಟಕ ಬ್ಯಾಂಕ್‌ಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು **"INSUFFICIENT FUND"** ಎಂಬ ಹಿಂಬರಹದೊಂದಿಗೆ ದಿಃ **14.03.2022** ರಂದು ಚೆಕ್‌ನ್ನು ವಾಪಸ್ಸು ನೀಡಿರುತ್ತಾರೆ. ಆದ್ದರಿಂದ ಅವರು ದಿಃ **23.03.2022** ರಂದು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ನೊಂದಾಯಿತ ಮತ್ತು ತ್ವರಿತ ಅಂಚೆ ಮೂಲಕ ನೀಡಿದ್ದು, ಆರೋಪಿಯ ಎರಡೂ ವಿಳಾಸಗಳಿಗೆ ನೋಟೀಸು ಜಾರಿಯಾಗಿದ್ದು , ನೀವು ಯಾವುದೇ ಉತ್ತರ ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.**138** ಮತ್ತು **142** ಎನ್.ಐ.ಆಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**1.** ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ **?**

ಉತ್ತರ ಃ

**2.** ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ **?**

ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಲಾಗಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ಆಪಾದನೆ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ **06.07.2023.**

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.